ಜಿ.ಎಸ್. ಆಮೂರ

# 'ಒಂದೊಂದು ನೆನಪಿಗೂ ಒಂದೊಂದು ವಾಸನೆ'ಯಲ್ಲಿ ವಿಸ್ಮಯ ಹಾಗೂ ಜಿಜ್ಞಾಸೆ

ಸಣ್ಣಕತೆ ಹಾಗೂ ಪ್ರಬಂಧಗಳ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿ ಪ್ರಸಿದ್ಧರಾದ ಎಸ್. ದಿವಾಕರರ ನಾಲ್ಕನೆಯ ಪ್ರಬಂಧಗಳ ಸಂಕಲನ 'ಒಂದೊಂದು ನೆನಪಿಗೂ ಒಂದೊಂದು ವಾಸನೆ' ಎರಡು ವರ್ಷಗಳ ಹಿಂದೆಯೇ ಪ್ರಕಟವಾಗಿದ್ದರೂ ಅದು ನನಗೆ ಓದಲು ದೊರೆತದ್ದು ತೀರ ಇತ್ತೀಚೆಗೆ. ಸಂಕಲನದ ಶೀರ್ಷಿಕೆಯೇ ನಮ್ಮನ್ನು ವಿಚಾರಕ್ಕೆ ಹಚ್ಚುತ್ತದೆ. ನೆನಪುಗಳಿಗೂ ಸಾಹಿತ್ಯಕ್ಕೂ ಇರುವ ಮೂಲಭೂತ ಸಂಬಂಧ ಎಲ್ಲರಿಗೂ ತಿಳಿದಿರುವಂಥದು. ಆದರೆ 'ವಾಸನೆ'ಗೂ ಸಾಹಿತ್ಯಕ್ಕೂ ಸಂಬಂಧ ಯಾವುದು? 'ವಾಸನೆ' ಪದವನ್ನು ದಿವಾಕರರು ಸಾಮಾನ್ಯ ಅರ್ಥದಲ್ಲಿಯೇ, ಅಂದರೆ ಘ್ರಾಣೇಂದ್ರಿಯದಿಂದ ದೊರಕುವ ಅನುಭವ ಎಂಬ ಅರ್ಥದಲ್ಲಿಯೇ, ಬಳಸುತ್ತಾರೆ. ಆದರೆ, ವಾಸನೆ ಎಂಬ ಪದಕ್ಕೆ ಇನ್ನೂ ಆಳವಾದ ಅರ್ಥವಿದೆ. ಅದ್ದು 'ಸಂಸ್ಕಾರವಿಶೇಷ', 'ಪೂರ್ವಪ್ರಜ್ಞಾರೂಪಾ ಭಾವನಾ' ಎಂದೂ ವ್ಯಾಖ್ಯಾನಿಸಲಾಗಿದೆ. "ವಾಸನೆಗಳು ನಮ್ಮ ನೆನಪನ್ನು ಉದ್ದೀಪಿಸುವುದಷ್ಟೇ ಅಲ್ಲ, ನಮ್ಮ ನೆನಪಿನಲ್ಲೇ ಉಳಿದುಬಿಡುತ್ತವೆ" ಎಂದು ದಿವಾಕರರು ಹೇಳುವುದು ಸರಿಯೇ. ಆದರೆ, ಅವುಗಳ ವ್ಯಾಪ್ತಿ ಮತ್ತು ಕಾರ್ಯ ಇನ್ನೂ ಹೆಚ್ಚಿನವುಗಳು. ಅವು ಜನ್ಮಾಂತರಗಳನ್ನು ಒಳಗೊಳ್ಳಬಲ್ಲವು ಹಾಗೂ ಪ್ರತ್ಯಭಿಜ್ಞೆಯ ರೂಪದಲ್ಲಿ ಜ್ಞಾನಕ್ಕೂ ಕಾರಣವಾಗಬಲ್ಲವು. 'ರಮ್ಯಾಣಿ ವೀಕ್ಷ...' ಎಂದು ಪ್ರಾರಂಭವಾಗುವ ಅಭಿಜ್ಞಾನಶಾಕುಂತಲದ ಶ್ಲೋಕದಲ್ಲಿ ಈ ನೆನಪುಗಳು 'ಅಬೋಧ ಪರ್ವ'ಗಳು ಹಾಗೂ ಅನಿರೀಕ್ಷಿತವಾಗಿ ಮನಸ್ಸಿನಲ್ಲಿ ಏಳುವುವು' ಎಂದು ಸೂಚಿಸಲಾಗಿದೆ. ಅವುಗಳನ್ನು 'ಸಂಸ್ಕಾರ'ಗಳೆಂದೂ ಕರೆಯಲಾಗಿದೆ. ವಿಜ್ಞಾನವಾದದಲ್ಲಿ ಇವೇ ಜ್ಞಾನದ ಮೂಲಗಳು.

ಪ್ರಬಂಧ ಪ್ರಕಾರದ ಬಗ್ಗೆ ದಿವಾಕರರಲ್ಲಿ ಸ್ಪಷ್ಟ ಕಲ್ಪನೆಯಿದೆ. 'ಪ್ರಬಂಧ: ಹಲವು ಪ್ರಕಾರಗಳ

'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಬೇರೆ ಬೇರೆ ಓದುಗರು ಕನ್ನಡ ಪುಸ್ತಕಗಳ ಬಗ್ಗೆ ಬರೆಯಲಿದ್ದಾರೆ.